ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:     ದಿನಾಂಕ : DATE : 25/3/21

# ಎನ್ನಾರೈಗಳಿಗೆ ಅಂಚೆ ಮತ ವ್ಯವಸ್ಥೆ ಇಲ್ಲ

25/3/21

**ಕೇಂದ್ರ ಕಾನೂನು ಸಚಿವರ ಸ್ಪಷ್ಟನೆ**

**ನವದೆಹಲಿ:** ಐದು ರಾಜ್ಯಗಳ ಚುನಾವಣೆ ವೇಳೆ ಎನ್‌ಆರ್‌ಐಗಳಿಗೆ ಎನ್‌ಆರ್‌ಐಗಳಿಗೆ ವಿದ್ಯುನ್ಮಾನ ಆಧಾರಿತ ಮತದಾನ (ಇಟಿಪಿಬಿಎಸ್) ಸೌಲಭ್ಯ ನೀಡಲಾಗುವುದಿಲ್ಲ, ಹೀಗೆಂದು ಕೇಂದ್ರ ಸರ್ಕಾರ ಲೋಕಸಭೆಗೆ ಬುಧವಾರ ತಿಳಿಸಿದೆ. ಈ ಬಗ್ಗೆ ಇನ್ನೂ ಪರಿಶೀಲನೆ ನಡೆಸಲಾಗುತ್ತಿದೆ ಮತ್ತು ವಿದೇಶಾಂಗ ಸಚಿವಾಲಯದ ಜತೆಗೆ ಚರ್ಚೆ ನಡೆಸಲಾಗುತ್ತಿದೆ ಎಂದು ಕಾನೂನು ಸಚಿವ ರವಿಶಂಕರ ಪ್ರಸಾದ್ ಲಿಖಿತ ಉತ್ತರದಲ್ಲಿ ಸದನಕ್ಕೆ ತಿಳಿಸಿದ್ದಾರೆ.

**405 ಪೈಲಟ್‌ಗಳ ಕೊರತೆ:** ಭಾರತೀಯ ವಾಯು ಪಡೆಯ ನಿಗದಿತ ಸಂಖ್ಯೆಗಿಂತ 405 ಪೈಲಟ್‌ಗಳ ಕೊರತೆಯಿದೆ ಎಂದು ರಕ್ಷಣಾ ಇಲಾಖೆಯ ಸಹಾಯಕ ಸಚಿವ ಶ್ರೀಪಾದ್ ನಾಯಕ್, ಲೋಕಸಭೆಗೆ ತಿಳಿಸಿದ್ದಾರೆ. ಇದೇ ವೇಳೆ, ಚೀನಾ ಹೊಂದಿರುವ ಹೈಪರ್‌ಸಾನಿಕ್ ಯುದ್ಧ ವಿಮಾನಗಳನ್ನು ಸದೆಬಡಿಯುವಂಥ ಯುದ್ಧ ವಿಮಾನಗಳು ನಮ್ಮಲ್ಲಿವೆಯೇ ಎಂಬ ಪ್ರಶ್ನೆಗೆ, ಇದು ಸೂಕ್ಷ್ಮ ವಿಚಾರ. ಹಾಗಾಗಿ, ಈ ಬಗ್ಗೆ ಮಾಹಿತಿ ನೀಡಲಾಗದು ಎಂದರು.

**ಬಜೆಟ್ ಅಂಗೀಕಾರ:** ಕೇಂದ್ರ ಮುಂಗಡಪತ್ರಕ್ಕೆ ರಾಜ್ಯಸಭೆ ಅಂಗೀಕರಿಸಿದೆ.

**ಒಪ್ಪಿಗೆ:** ಬಾಲಾಪರಾಧಿ ಕಾಯ್ದೆ ತಿದ್ದುಪಡಿ ಮಸೂದೆಗೆ ಲೋಕಸಭೆ ಒಪ್ಪಿಗೆ ನೀಡಿದೆ.

**ನಿರಾಳ:** ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದೇಶಿ ಮೂಲದ ಇ-ಕಾಮರ್ಸ್ ಸಂಸ್ಥೆಗಳು, ಭಾರತದಲ್ಲೇ ತಯಾರಾದ ಉತ್ಪನ್ನಗಳನ್ನು ಮಾರಾಟ ಮಾಡುವುದಾದರೆ ಆ ವ್ಯವಹಾರಗಳ ಮೇಲೆ ಶೇ. 2ರಷ್ಟು ಸುಂಕ ಹೇರುವುದಿಲ್ಲ ಎಂದು ಕೇಂದ್ರ ಸರ್ಕಾರ ಪ್ರಕಟಿಸಿದೆ.